**<u>ದಿನಾಂಕ 29-07-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ :ಶ್ರೀಮತಿ.ಎಸ್.ಬಿ.ಪಿ ವಕೀಲರಿಂದ ಪ್ರತಿವಾದಿ ಪರವಾಗಿ</u>**

ನಾನು ಈ ಕೇಸಿನಲ್ಲಿ ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದ್ದು, ಅದನ್ನು ತಯಾರಿಸಲು ಗೌರವಾನ್ವಿತ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ಸರಿಯಾಗಿರುತ್ತವೆ ಮತ್ತು ಸತ್ಯವಾಗಿರುತ್ತವೆ ಎಂದು ಈ ಮೂಲಕ ಪ್ರಮಾಣಿಸಿಕರಿಸುತ್ತೇನೆ.

ನಾನು ಈಗ ಅಸಲು ದಾವಾ ಸಂಖ್ಯೆ 358/2006 ರಲ್ಲಿನ ವಾದ ಪತ್ರದ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಡಿ-1 ಎಂದು, ಅಸಲು ದಾವಾ ಸಂಖ್ಯೆ 358/2006 ರಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1 ಮತ್ತು ಅದರೊಂದಿಗೆ ಲಗತ್ತಿಸಿದ ಪ್ರಮಾಣಪತ್ರದ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಡಿ-2 ಎಂದು, ಸದರಿ ಅರ್ಜಿಗೆ ಸಲ್ಲಿಸಿದ ಆಕ್ಷೇಪಣೆ ಮತ್ತು ಅದರಲ್ಲಿ ಆದ ಆದೇಶಗಳ ದೃಢೀಕೃತ ನಕಲು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-3 ಮತ್ತು ನಿಡಿ-4 ಎಂದು, ಅಸಲು ದಾವಾ ಸಂಖ್ಯೆ 358/2006 ರಲ್ಲಿನ ಆದೇಶ ಪುಟಗಳ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅದನ್ನು ನಿಡಿ-5 ಎಂದು, ಅಮಲಜಾರಿ ಪ್ರಕರಣ ಸಂಖ್ಯೆ 1/2010 ರಲ್ಲಿನ ಅರ್ಜಿಯ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಡಿ-6 ಎಂದು, ಸದರಿ ಅಮಲಜಾರಿ ಪ್ರಕರಣ ಸಂಖ್ಯೆ 1/2010 ರಲ್ಲಿನ ಆದೇಶ ಪುಟಗಳ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಡಿ-7 ಎಂದು, ಖಾಸಗಿ ಪಿರ್ಯಾದಿ ಸಂಖ್ಯೆ 91/2024 ರಲ್ಲಿನ ಪಿರ್ಯಾದಿಯ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಡಿ-8 ಎಂದು, ಖಾಸಗಿ ಪಿರ್ಯಾದಿ ಸಂಖ್ಯೆ 32/2025 ರಲ್ಲಿನ ಪಿರ್ಯಾದಿಯ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಡಿ-9 ಎಂದು, ಸಿಸಿ ನಂ.1030/2024 ರಲ್ಲಿನ ಆದೇಶ ಪುಟಗಳ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಡಿ-10 ಎಂದು, ಸದರಿ ಸಿಸಿ ನಂ.1030/2024 ರಲ್ಲಿ ಸಲ್ಲಿಸಿದ ಜಂಟಿ ಮೆಮೊದ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಡಿ-11 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ವಜಾ ಮಾಡಬೇಕಾಗಿ ವಿನಂತಿ.

ವಾದಿ ಪರ ವಕೀಲರು ಗೈರ ಹಾಜರ ಇದ್ದು, ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )
ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ